ಓಪನ್ ಎಂಡೆಡ್ ಸ್ಟ್ರಕ್ಚರ್ ಇದೆ. ಮುಂದಿನ ವರ್ಷಗಳಲ್ಲಿ ಏನು ಕಲೀಬೇಕು ಅನ್ನೋದನ್ನು ವಿದ್ಯಾರ್ಥಿಗಳೇ ಡಿಸೈನ್ ಮಾಡಿ ಪ್ರಪೋಸ್ ಮಾಡಬಹುದು. ಇಂಡಿಯಾದಲ್ಲಿ ಹಳೆಯ ಮೆಥೆಡ್ ಇರೋದ್ರಿಂದ ಶಿಕ್ಷಕರಿಗೆ ಹೊರಗೆ ಬರ್ಲಿಕ್ಕೆ ಆಗ್ತಾಯಿಲ್ಲ. ಹೊರಗೆ ಕಲ್ತೋರು ಬಂದು ಕರಿಕುಲಮ್ ಬದಲಾವಣೆ ಮಾಡ್ತೇವೆ ಅಂದ್ರೆ, ಒಳಗೆ ಬರ್ಲಿಕ್ಕೂ ಬಿಡೋದಿಲ್ಲ. ಟೀಚರ್ಸ್ ಮತ್ತು ಸ್ಕೂಲ್‌ಗಳು ಒಂದು ಸಂಕುಚಿತ ಐಡಿಯಾಕ್ಕೆ ಮೌಲ್ಡ್ ಆಗಿವೆ.

**◆ ನಿಮ್ಮ ಕಲೆಯಲ್ಲಿ ದೈನಿಕ ಬದುಕಿನ 'ಸಾಮಾನ್ಯ' ಅಂತ ಕರೆವ ಬಿರುಕು ಬಿಟ್ಟ ರಸ್ತೆ, ಗೆದ್ದಲು ತಿಂದ ಮರ, ಧೂಳು, ಕೆಸರು ಇವೇ ವಸ್ತು. ಕಸ ಅಂತ ಲೋಕ ಬಿಸಾಡಿರೋದನ್ನು ತರತೀರಿ.**

ನೀವು ಕಸ ಅಂತಂದ್ರಿ. ಆ ಕಸ ಬಹಳಷ್ಟು ಮಾಹಿತಿಯನ್ನು ಹೊತ್ತು ತಂದಿರ್ತದೆ. ನನ್ನ ಒಂದು ಶಿಲ್ಪವನ್ನು 'ಡೇಟಾ ಮೈನಿಂಗ್' ಅಂತ ಕರ್ದಿದ್ದೀನಿ. ಅದನ್ನು ಪ್ಲೈವುಡ್ ಮುಖಾಂತರ ಮಾಡಿದ್ದೇನೆ. ಪ್ಲೈವುಡ್ ಮಾಡೋದು ನಿಮಗೆ ಗೊತ್ತಲ್ಲ? ಹಲವಾರು ಮರಗಳ ಕಾಂಡವನ್ನು ತೆಗ್ದು ಲೇತ್‌ನಲ್ಲಿ ತೆಳ್ಳಗೆ, ಬೆಂಕಿಪೊಟ್ಟಣದ ಒಳಗಿರುವ ಮರದ ಹಾಳೆಗಳ ತರಹ ಪದರ ಎಬ್ಬಿಸ್ತಾರೆ. 10-15 ಪದರಗಳನ್ನು ಒಂದರ ಮೇಲೊಂದು ಅಂಟಿಸ್ತಾರೆ. ಮರದಲ್ಲಿ ಇರುವಂತಹ ಮೈವಳಿಕೆ ಏನಿದೆ, ಅದು ಬೇರೆಬೇರೆ ಡೈರೆಕ್ಷನಲ್ಲಿ ಇರ್ತದೆ. ಹಲವಾರು ಮರಗಳನ್ನು ಒಂದರ ಮೇಲೆ ಒಂದು ಅಂಟಿಸಿ ಪ್ಲೈವುಡ್ ತಯಾರಿಸ್ತಾರೆ. 400 ಪ್ಲೈವುಡ್ ಉಪಯೋಗಿಸಿದಾಗ 4000 ಡೇಟಾಗಳು ಬಂದ ಹಾಗೆ ಅನಿಸುತ್ತದೆ. ಡೇಟಾ ಮೈನಿಂಗ್ ಮಾಡೋದು 'ಆರ್ಟಿಫಿಶಿಯಲ್ ಇಂಟಲಿಜೆನ್ಸ್'ನಲ್ಲಿ ಇದೇ ರೀತಿ. ಒಂದು ಸಮೂಹದ ಅಥವಾ ಒಬ್ಬ ಮನುಷ್ಯನ ಒಂದು ವರ್ಷದ ಇಡೀ ಚಟುವಟಿಕೆಯ ಡೇಟಾ ತೆಕ್ಕೊಂಡು ಅವ್ರಿಗೆ ಏನು ಬೇಕು-ಬೇಡ ಅಂತ ವಿಶ್ಲೇಷಣೆ ಮಾಡ್ತಾರೆ. ಆಗ ಅವರೊಟ್ಟಿಗೆ ವ್ಯವಹಾರ ಮಾಡ್ಲಿಕ್ಕೆ ಸುಲಭ ಆಗ್ತದೆ. ಈ ತರಹ ಒಂದು ಮೆಟೀರಿಯಲ್ ಅಥವಾ ಕಸ ಕೊಡುವ ಸಂಕೇತಗಳನ್ನು ಅಧ್ಯಯನ ಮಾಡೋದು ಬಹಳ ಎಕ್ಸೈಟಿಂಗ್. ಪರ್ವತ ಒಂದು ಅಗಾಧವಾದ ಡೇಟಾ. ಆ ಡೇಟಾ ಅರ್ಥ ಮಾಡ್ಕೊಳ್ಳಿಕ್ಕೆ ಬಹಳ ಕಷ್ಟ. ಅದೇ ಪರ್ವತದಲ್ಲಿ ಸಿಗೋ ಸಣ್ಣಕಸ ಎತ್ತಿಕೊಂಡು ವಿಮರ್ಶೆ ಮಾಡಿದ್ರೆ, ಆ ಪರ್ವತವನ್ನು ವಿವರಿಸಬಹುದು.

**◆ ನಿಮ್ಮ ಕೆಲಸಕ್ಕೆ ಅಂತರರಾಷ್ಟ್ರೀಯ ವ್ಯಾಪ್ತಿಯಿದೆ. ಕಲಿಕೆ, ಕಲಾಸೃಷ್ಟಿ, ಕಲಾಪ್ರದರ್ಶನಗಳ ವಿಷಯದಲ್ಲಿ, ಸ್ಥಳೀಯತೆ ಮತ್ತು ಅಂತರರಾಷ್ಟ್ರೀಯತೆ ಹೇಗೆ ಕೆಲಸ ಮಾಡುತ್ತೆ?**

ಮನುಷ್ಯನ ಮೂಲಭೂತ ಆಸಕ್ತಿ ಅನ್ನೋದು ಕುಂದಾಪುರದಲ್ಲಿ ಸಿಯೋಲ್‌ನಲ್ಲಿ ಒಂದೇ. ಬಿಸಿ ಅನ್ನೋದು ಎಲ್ಲಾ ಕಡೆಯಲ್ಲಿಯೂ ಒಂದೇ. ಯುನಿವರ್ಸಲ್ ಐಡಿಯಾಗಳಿಂದ ನಾವು ಕಲಾಕೃತೀನ ಆರಂಭ ಮಾಡಬೇಕು. ಮೊದಲ ಸಿಗ್ನಲ್ ಪರಿಚಿತವಾಗಿದ್ರೆ ಮನುಷ್ಯರಿಗೆ ಆಸಕ್ತಿ ಜಾಸ್ತಿ. ಇಲ್ಲಾಂದ್ರೆ 'ನಮ್ಗೆ ಅರ್ಥ ಆಗಲ್ಲಪ್ಪ' ಅಂತ ದೂರ ಹೋಗಿಬಿಡ್ತಾರೆ. ಬಹುಶಃ ಎರಡನೆಯ ಸಿಗ್ನಲ್ ಆಗಿ ಸ್ಥಳೀಯತೆಯನ್ನ ವಿವರಿಸಬಹುದು. ನಾನು ಕಲಾಕೃತಿಗಳನ್ನು ಆಯ್ಕೆ ಮಾಡುವಾಗ ಪರಿಚಿತ ಸಿಗ್ನಲನ್ನು ಮುಖ್ಯವಾಗಿ ಪರಿಗಣನೆ ಮಾಡ್ತೇನೆ. 2019ರಲ್ಲಿ ನನ್ನ ಹತ್ತು ವರ್ಷದ ಕಲಾಕೃತಿಗಳ ಪ್ರದರ್ಶನ ಆಯ್ತು ನ್ಯೂಜೆರ್ಸಿಯಲ್ಲಿ. ನಾನು ಮೊದಲ ಹಂತದಲ್ಲಿ ಮಾಡಿದ ಕಲಾಕೃತಿಗಳನ್ನೆಲ್ಲ ಮ್ಯೂಸಿಯಂನವರು ಆಯ್ಕೆ ಮಾಡಿದ್ರು. ಇದು ಪ್ರೇಕ್ಷಕರಿಗೆ ಸರಿ ಬೀಳುತ್ತೋ ಇಲ್ವೋ ಸಂಶಯ ಇತ್ತು. ಕೃತಿಗಳನ್ನು ಪ್ರದರ್ಶಿಸಲು ನಾನು ಕಟ್ಟಡ ಕಟ್ಟುವಾಗ ಮೇಲೆ ಹತ್ತುವುದಕ್ಕೆ ಉಪಯೋಗಿಸುವಂತಹ ಸ್ಕಫೋಲ್ಡಿಂಗನ್ನೇ ಎಗ್ಸಿಬಿಶನ್ ಹಾಲ್ ಆಗಿ ಪರಿವರ್ತನೆ ಮಾಡಿದೆ. ಕಲಾಕೃತಿಗಳನ್ನ ಅದರ ಮೇಲಿಟ್ಟು ಪ್ರದರ್ಶನ ಮಾಡಿದೆ. ಇದು ವರ್ಕ್ ಇನ್ ಪ್ರೋಗ್ರೆಸ್ ಅನ್ನುವ ಸಿಗ್ನಲ್ ಕೊಡುತ್ತೆ. ಕಟ್ಟಡದ ಕೆಲಸಗಾರ ಹೇಗೆ ಮೇಲೆ ಹೋಗಿ ಕೆಲಸ ಮಾಡ್ತಾನೊ, ಆ ತರಹ ಪ್ರೇಕ್ಷಕರು ಮೇಲೆ ಹತ್ತಿ ಹೋಗಿ ಕಲಾಕೃತಿ ನೋಡುವ ಅನುಭವ ಆಗುತ್ತೆ. ಇದು ಕಲಾಕೃತಿಗಳನ್ನ ಅರ್ಥ ಮಾಡ್ಕೊಳ್ಳೋದು ಸಹ 'ಇಟ್ಸ್ ನಾಟ್ ಕಂಪ್ಲೀಟ್' ಅನ್ನುವ ಸಿಗ್ನಲನ್ನ ಕೊಡ್ತದೆ.

**◆ ನಿಮ್ಮ ಕಲಾಕೃತಿಗಳಲ್ಲಿ ಕೆಲವು ಥೀಮ್ ಅಥವಾ ವಸ್ತು ರಿಪೀಟ್ ಆಗ್ತಿವೆ. ಉದಾಹರಣೆಗೆ, ವಸಾಹತುಶಾಹಿ ಇತಿಹಾಸ. ರತ್ನಗಂಬಳಿಯ ಮೇಲೆ ಮಾಡಿರುವ 'ಇಂಟರ್‌ಫಿಯರೆನ್ಸ್' ಅಥವಾ**